# Guruvandana Programme

ಹೊಸ ದಿಗಂತ
ಸೋಮವಾರ, 5 ಸೆಪ್ಟೆಂಬರ್ 2022, ಬೆಂಗಳೂರು

## ಶಿಕ್ಷಕರು ದಾರಿದೀಪ

**ಬೆಂಗಳೂರು:** ನನ್ನನ್ನು ಸಮಾಜ ಇಂದು ಗುರುತಿಸಿ, ಗೌರವಿಸುತ್ತಿರುವುದಕ್ಕೆ ನನ್ನ ಶಾಲೆಯ ಶಿಕ್ಷಕರೇ ಕಾರಣ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಪ್ರಣವ ಫೌಂಡೇಶನ್ ಮತ್ತು ಆರ್ ವಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಜೆ.ಪಿ. ನಗರದ ಆರ್.ವಿ.ಡೆಂಟಲ್ ಕಾಲೇಜಿನಲ್ಲಿ ಆಯೋಜಿಸಿದ ಗುರು ವಂದನಾ -2022 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನನಗೆ ಗಣಿತ ಬಹಳ ಕಷ್ಟದ ವಿಷಯ. ನಾನು ಅತಿ ಕಡಿಮೆ ಅಂಕ ಪಡೆಯುತ್ತಿದ್ದ ವಿಷಯ ಗಣಿತವಾದರೂ, ನನ್ನನ್ನು ಆತ್ಮೀಯವಾಗಿ ಇಷ್ಟಪಟ್ಟು ಪ್ರೋತ್ಸಾಹಿಸುತ್ತಿದ್ದವರೇ ಗಣಿತ ಶಿಕ್ಷಕರು. ಭಾಷಣದಲ್ಲಿ ನಾನು ಚುರುಕಾಗಿದ್ದುದರಿಂದ ಹುರುಪಿನಿಂದ ಭಾಷಣ ಮಾಡಿದಾಗ ಆತ್ಮವಿಶ್ವಾಸ ಮತ್ತೆ ಮರುಕಳಿಸುತ್ತಿತ್ತು. ಇದು ಶಿಕ್ಷಕರು ಮಾಡುತ್ತಿದ್ದ ಉತ್ತಮ ಅಭ್ಯಾಸ ಎಂದರು.

**ಮಕ್ಕಳು ಶಿಕ್ಷಣ ಪಡೆದು ಉತ್ತಮ ಬದುಕು ಪಡೆಯಲಿ:** ಪದ್ಮಶ್ರೀ ಹರೇಕಳ ಹಾಜಬ್ಬ ಮಾತನಾಡಿ, ಬಡತನದಿಂದಾಗಿ ನಾನು ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ಆದರೆ ಮುಂದಿನ ಪೀಳಿಗೆಯ ಮಕ್ಕಳಿಗಾಗಿ ಶಾಲೆ ಕಟ್ಟಬೇಕೆಂಬ ಕನಸು ಕಂಡೆ. ಅದರಂತೆ ಅನೇಕ ದಾನಿಗಳು, ಸರ್ಕಾರಿ ಅಧಿಕಾರಿಗಳ ಸಹಾಯ ಪಡೆದು ಶಾಲೆ ನಿರ್ಮಿಸಿದೆ. ನನಗೆ ವಿದ್ಯಾಭ್ಯಾಸ ಇಲ್ಲದಿದ್ದರೂ ಬೇರೆ ಮಕ್ಕಳು ಶಿಕ್ಷಣ ಪಡೆದು ಉತ್ತಮ ಬದುಕು ನಡೆಸಬೇಕು ಎಂದರು.



> ಗುರುಗಳ ಸ್ಥಾನ ಸುಲಭವಾಗಿ ಯಾರಿಗೂ ಸಿಗುವುದಿಲ್ಲ, ಗುರುಗಳು ಎಂದರೆ ಇಡೀ ಸಮಾಜ ಗುರುತಿಸಿ ಗೌರವಿಸುತ್ತದೆ. ಬಾಲ್ಯದಲ್ಲಿ ನನ್ನ ದೇಹದಲ್ಲಿ ಹೆಣ್ಣಿನ ಲಕ್ಷಣಗಳು ಕಂಡುಬಂದಾಗ, ಅದನ್ನು ಒಪ್ಪಿಕೊಂಡು ಬಾಳಲು ಆರಂಭಿಸಿದೆ. ಆದರೆ ಇದರ ಪರಿಣಾಮವಾಗಿ ಕುಟುಂಬದಿಂದ, ಸಮಾಜದಿಂದ ಅನೇಕ ಬಾರಿ ನೋವು ಅನುಭವಿಸಬೇಕಾದ ಪ್ರಸಂಗ ಬಂತು.
>
> ■ ಮಂಜಮ್ಮ ಜೋಗತಿ, ಜಾನಪದ ಅಕಾಡೆಮಿಯ ಅಧ್ಯಕ್ಷೆ

**5 ಲಕ್ಷ ನೆರವು:** ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಎಂ.ಪಿ.ಶ್ಯಾಮ್ ಅವರು ಹರೇಕಳ ಹಾಜಬ್ಬ ಅವರ ಮಂಗಳೂರಿನ ನ್ಯೂ ಪಡ್ಪು ಸರ್ಕಾರಿ ಶಾಲೆಗೆ 5 ಲಕ್ಷ ನೆರವು ನೀಡುವುದಾಗಿ ತಿಳಿಸಿದರು.

ಪ್ರಜಾವಾಣಿ ಸೋಮವಾರ • ಸೆಪ್ಟೆಂಬರ್ 5, 2022

## ಆರ್.ವಿ. ಪ್ರಣವ ವಿದ್ಯಾರತ್ನ ಪ್ರಶಸ್ತಿ ಪಡೆದ ಹರೇಕಳ ಹಾಜಬ್ಬ ಅಭಿಮತ

# ‘ಮಕ್ಕಳು ಶಿಕ್ಷಣ ಪಡೆದು ಉತ್ತಮ ಬದುಕು ನಡೆಸಲಿ’

ಪ್ರಜಾವಾಣಿ ವಾರ್ತೆ



ಗುರು ವಂದನೆ ಕಾರ್ಯಕ್ರಮದಲ್ಲಿ ಹರೇಕಳ ಹಾಜಬ್ಬ ಅವರಿಗೆ ‘ಆರ್.ವಿ. ಪ್ರಣವ ವಿದ್ಯಾರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಂಜಮ್ಮ ಜೋಗತಿ, ಸಂಸದ ತೇಜಸ್ವಿ ಸೂರ್ಯ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಎಂ.ಪಿ.ಶ್ಯಾಮ್, ಪ್ರಣವ್ ಫೌಂಡೇಶನ್ ಗೌರವ ಸಲಹೆಗಾರ ಆರ್. ಪ್ರಸಾದ್ ಇದ್ದಾರೆ

ಬೆಂಗಳೂರು: ‘ಬಡತನದಿಂದ ನನಗೆ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ಬೇರೆ ಮಕ್ಕಳು ಶಿಕ್ಷಣ ಪಡೆದು ಉತ್ತಮ ಬದುಕು ನಡೆಸಲಿ ಎಂದು ಶಾಲೆ ಕಟ್ಟಿದೆ’ ಎಂದು ‘ಅಕ್ಷರ ಸಂತ’ ಹರೇಕಳ ಹಾಜಬ್ಬ ಹೇಳಿದರು.

ಪ್ರಣವ್ ಫೌಂಡೇಶನ್, ಆರ್.ವಿ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹಾಗೂ ಆರ್.ವಿ.ದಂತ ಮಹಾವಿದ್ಯಾಲಯದಲ್ಲಿ ಭಾನುವಾರ ಆಯೋಜಿಸಿದ್ದ ಗುರು ವಂದನೆ ಕಾರ್ಯಕ್ರಮದಲ್ಲಿ ಆರ್.ವಿ. ಪ್ರಣವ ವಿದ್ಯಾರತ್ನ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ಮುಂದಿನ ಪೀಳಿಗೆಯ ಮಕ್ಕಳಿಗಾಗಿ ಶಾಲೆ ಕಟ್ಟಬೇಕೆಂದು ಕನಸು ಕಂಡೆ. ಅದರಂತೆ ಅನೇಕ ದಾನಿಗಳು, ಸರ್ಕಾರಿ ಅಧಿಕಾರಿಗಳ ಸಹಾಯ ಪಡೆದು ಶಾಲೆ ನಿರ್ಮಿಸಿದೆ’ ಎಂದು ಹೇಳಿದರು

ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ’ಗಣಿತ ವಿಷಯದಲ್ಲಿ ಬಹಳ ಹಿಂದುಳಿದಿದ್ದೆ. ಆಗ ಗಣಿತ ಶಿಕ್ಷಕರು ತರಗತಿಯ ಕೊನೆಯ ಅವಧಿಯಲ್ಲಿ ಆತ್ಮವಿಶ್ವಾಸ ಮೂಡಿಸಿದರು. ನಾನು ಸಂಸದನಾಗಿ ಗೌರವ ಪಡೆದಿರುವುದಕ್ಕೆ ಅಂತಹ ಶಿಕ್ಷಕರೇ ಕಾರಣ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಹೆಚ್ಚು ವಿದ್ಯಾವಂತರು ನೆಲೆಸಿದ್ದಾರೆ. ಆದರೆ ಕೆಲ ವರ್ಷಗಳಿಂದ ಈ ಕ್ಷೇತ್ರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ, ಈ ಕ್ಷೇತ್ರದಲ್ಲಿ ಮಕ್ಕಳಿಗೆ ಉಚಿತ ವಿಶೇಷ ತರಬೇತಿ ನೀಡುವ ಕಾರ್ಯಕ್ರಮ ಜಾರಿಗೊಳಿಸಲಾಗಿದೆ’ ಎಂದು ತಿಳಿಸಿದರು. ಮಂಜಮ್ಮ ಜೋಗತಿ ಇದ್ದರು.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಎಂ.ಪಿ.ಶ್ಯಾಮ್ ಅವರು, ಹರೇಕಳ ಹಾಜಬ್ಬ ಅವರ ಮಂಗಳೂರಿನ ನ್ಯೂಪಡ್ಪು ಸರ್ಕಾರಿ ಶಾಲೆಗೆ ₹5 ಲಕ್ಷ ನೆರವು ನೀಡುವುದಾಗಿ ಭರವಸೆ ನೀಡಿದರು.

---

**ಗುರುವಂದನಾ ಕಾರ್ಯಕ್ರಮ:** ಪ್ರಶಸ್ತಿ ಪ್ರದಾನ: ಎಂ ಪಿ. ಶ್ಯಾಮ್, ಭಾಷಣಕಾರರು: ತೇಜಸ್ವಿ ಸೂರ್ಯ, ಅತಿಥಿಗಳು: ಮಾತಾ.ಬಿ. ಮಂಜಮ್ಮ ಜೋಗತಿ, ಆರ್. ಪ್ರಸಾದ್, ಆಯೋಜನೆ: ಆರ್. ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಡೆಂಟಲ್ ಕಾಲೇಜ್, ಆಡಿಟೋರಿಯಂ, ಜೆ ಪಿ ನಗರ, ಮಧ್ಯಾಹ್ನ 2ರಿಂದ ಸಂಜೆ 6

---

**ಆರ್.ವಿ.ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಹಾಗೂ ಪ್ರಣವ್ ಫೌಂಡೇಷನ್:** ಶಿಕ್ಷಕರ ದಿನಾಚರಣೆ ಪ್ರಯುಕ್ತ ಗೌರವ ಸಮರ್ಪಣೆ ಹಾಗೂ ಹರೇಕಳ ಹಾಜಬ್ಬ ಅವರಿಗೆ ಆರ್.ವಿ.ಪ್ರಣವ ‘ವಿದ್ಯಾರತ್ನ ಪ್ರಶಸ್ತಿ-2022’ ಪ್ರದಾನ ಸಮಾರಂಭ. ಅಧ್ಯಕ್ಷತೆ: ಡಾ.ಎಂ.ಪಿ ಶ್ಯಾಮ್. ಮುಖ್ಯ ಅತಿಥಿ: ಮಂಜಮ್ಮ ಜೋಗತಿ. **ಸ್ಥಳ:** ಆರ್.ವಿ ಡೆಂಟಲ್ ಕಾಲೇಜ್ ಜೆ.ಪಿ ನಗರ. ಸಂಜೆ 3.

---

ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಂಜ್ಮೆಂಟ್, ಪ್ರಣವ್ ಫೌಂಡೇಶನ್ ಸಂಯುಕ್ತಾತ್ರಯದಲ್ಲಿ ಗುರುವಂದನಾ-2022. ಹರೇಕಳ ಹಾಜಬ್ಬರವರಿಗೆ ಆರ್.ವಿ.ಪ್ರಣವ, ವಿದ್ಯಾರತ್ನ ಪ್ರಶಸ್ತಿ



ಪ್ರದಾನ ಸಮಾರಂಭ. ಅಧ್ಯಕ್ಷತೆ: ಆರ್‌ಎಸ್‌ಎಸ್‌ಟಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್. ಮುಖ್ಯ ಭಾಷಣಕಾರರು: ಸಂಸದ ತೇಜಸ್ವಿ ಸೂರ್ಯ.. ಮುಖ್ಯಅತಿಥಿಗಳು: ಮಾತಾ ಬಿ.ಮಂಜಮ್ಮ ಜೋಗತಿ. ಆರ್.ಪ್ರಸಾದ್. ಸ್ಥಳ: ಜೆ.ಪಿ.ನಗರ, ಆರ್.ವಿ.ಡೆಂಟಲ್ ಕಾಲೇಜ್ ಆವರಣ. 3.00

---

**ಆರ್.ವಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಮತ್ತು ಪ್ರಣವ್ ಫೌಂಡೇಷನ್:** ಗುರುವಂದನಾ 2022- ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಅವರಿಗೆ ಆರ್.ವಿ. ಪ್ರಣವ ವಿದ್ಯಾರತ್ನ ಪ್ರಶಸ್ತಿ ಪ್ರದಾನ. ಮುಖ್ಯ ಅತಿಥಿ: ಸಂಸದ ತೇಜಸ್ವಿಸೂರ್ಯ. ಸ್ಥಳ: ಆರ್.ವಿ. ಡೆಂಟಲ್ ಕಾಲೇಜು ಆಡಿಟೋರಿಯಂ, ಜೆಸಿ ನಗರ. ಸಂಜೆ 6ಕ್ಕೆ.